KAVN400004312020

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹಡಗಲಿ

**ಉಪಸ್ಥಿತಿ**

**ಶ್ರೀಮತಿ.ಅಕ್ಷತಾ.ಟಿ**

ಬಿ.ಎ.ಎಲ್,ಎಲ್,ಬಿ. ಎಲ್.ಎಲ್.ಎಮ್,

**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹಡಗಲಿ.**

**ತೀರ್ಪಿನ ದಿನಾಂಕಃ 1 ನೇ ಜೂನ್ 2026**

## ಸಿ.ಸಿ.ನಂ.177/2020.

ಹಿರೇಹಡಗಲಿ ಪೋಲಿಸ್ ಠಾಣೆ. ....ಪಿರ್ಯಾದುದಾರರು

(ಸ ಸ ಅ ರವರು)

- ವಿರುದ್ಧ -

ಜಗ್ಗಿನ ದೇವೇಂದ್ರಪ್ಪ
ವಾಸಃ ಹೊಳಲು ಗ್ರಾಮ,
ತಾ:ಹಡಗಲಿ,
ಜಿಃವಿಜಯನಗರ ಜಿಲ್ಲೆ. ....ಆರೋಪಿ

(ಆರೋಪಿ ಪರ ಶ್ರೀ.ಬಿ.ಕೆ.,ವಕೀಲರು)

| | | |
|---|---|---|
| 1.ಅಪರಾಧ ನಡೆದ ದಿನಾಂಕ | : | 07.04.2019 |
| 2.ಅಪರಾಧ ವರದಿಯ ದಿನಾಂಕ | : | 01.01.2020 |
| 3.ಪ್ರಥಮ ಮಾಹಿತಿದಾರರ ಹೆಸರು | : | ವೀರಶೇಖರ |

4.ಸಾಕ್ಷ್ಯವನ್ನು ಅಭಿಲೇಖಿಸುವ ಪ್ರಾರಂಭದ ದಿನಾಂಕ : 18.11.2025

5.ಸಾಕ್ಷ್ಯವನ್ನು ಅಭಿಲೇಖಿಸುವ ಕೊನೆಯ ದಿನಾಂಕ : 29.05.2026

6.ಆರೋಪಿತನ ವಿರುದ್ಧ ಮಾಡಲಾದ ಅಪಾದನೆಗಳು: ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ಮತ್ತು 34 ರಡಿಯಲ್ಲಿ

7. ನ್ಯಾಯಾಧೀಶರ ಅಭಿಪ್ರಾಯ : ದೋಷಾರೋಪಣೆ ಸಾಭೀತಾಗಿರುವುದಿಲ್ಲ.

# ತೀರ್ಪು

ಹಿರೇಹಡಗಲಿ ಪೋಲಿಸ್ ಠಾಣೆ, ಹಿರೇಹಡಗಲಿ ಇವರು ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2) ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶಃ-

ದಿನಾಂಕ 07-04-2019 ರಂದು ಸಂಜೆ 05-45 ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸ ಠಾಣೆಯ ವ್ಯಾಪ್ತಿಯ ಹೊಳಲು ಗ್ರಾಮದ ಎ.ಕೆ. ಕಾಲೋನಿಯ ರಸ್ತೆಯ ಬದಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಸರ್ಕಾರದಿಂದ ಯಾವುದೇ ಪರವಾನಗಿ ಇಲ್ಲದೆ ಅನಧಿಕೃತವಾಗಿ ಮದ್ಯ ಸಂಗ್ರಹಿಸಿ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿದ್ದು, ಚಾಸಾ-1 ರವರು ಪಂಚರು ಹಾಗೂ ಸಿಬ್ಬಂದಿಯವರೊಡನೆ ದಾಳಿ ಮಾಡಿದಾಗ, ಸದರಿ ಸ್ಥಳದಲ್ಲಿ ಇದ್ದಂತಹ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಮಾಲನ್ನು ಪರಿಶೀಲನೆ ಮಾಡಿ ನೋಡಲಾಗಿ ಅದರಲ್ಲಿ ಒಟ್ಟು ಮದ್ಯದ ಬೆಲೆ ರೂ.955/- ಮದ್ಯವಿದ್ದು, ಚಾಸಾ-1 ರವರು ಪಂಚರ ಸಮಕ್ಷಮ ಸದರಿ ಅಕ್ರಮ ಮದ್ಯವನ್ನು ವಶಪಡಿಸಿಕೊಂಡಿದ್ದು ಮತ್ತು ಸರ್ಕಾರದಿಂದ ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ

ಮದ್ಯದವನ್ನು ಮಾರಾಟ ಮಾಡುವುದು ಅಪರಾಧ ಎಂದು ಗೊತ್ತಿದ್ದರೂ ಸಹ ಅನಧಿಕೃತವಾಗಿ ಒಟ್ಟು ಮದ್ಯದ ಬೆಲೆ ರೂ.955/- ಮದ್ಯವಿದ್ದು, ಅಕ್ರಮ ಮದ್ಯವನ್ನು ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವುದು ಅಪರಾಧವಾಗಿರುತ್ತದೆ.

3) ಚಾಸಾ.1 ರವರು ಸಲ್ಲಿಸಿದ ಪ್ರಥಮ ಮಾಹಿತಿಯ ಮೆರೆಗೆ ಹಿರೇಹಡಗಲಿ ಪೊಲೀಸ್ ಠಾಣೆ, ಹಿರೇಹಡಗಲಿ ಗುನ್ನೆ ನಂಬರ.64/2019 ರಂತೆ ಪ್ರಕರಣರವನ್ನು ದಾಖಲಿಸಿಕೊಂಡಿರುತ್ತಾರೆ.

4) ಚಾಸಾ.10 ರವರು ತನಿಖೆಯನ್ನು ಪೂರೈಸಿ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5) ದೋಷಾರೋಪಣೆಯನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯದಿಂದ ಆರೋಪಿತನ ವಿರುದ್ಧ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಆದೇಶ ಜಾರಿಯಾದ ಮೇಲೆ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿತನಿಗೆ ಕಲಂ. 207 ಸಿ.ಆರ್.ಪಿ.ಸಿ. ಪ್ರಕಾರ ದೋಷಾರೋಪಣೆಯ ಪ್ರತಿಯನ್ನು ನೀಡಲಾಯಿತು. ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಆಲಿಸಲಾಯಿತು.

6) ಆರೋಪಿತನ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದ್ದು, ಆರೋಪಿತನು ತಪ್ಪು ಒಪ್ಪಿಕೊಳ್ಳದೆ ವಿಚಾರಣೆ ಆಗಲು ಕೇಳಿಕೊಂಡಿರುತ್ತಾರೆ. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತು ಪಡಿಸಲು ಪ್ರಾಸಾ.01 ರಿಂದ

ಪ್ರಾಸಾ.4 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ, ನಿಪಿ.01 ರಿಂದ 3 ಹಾಗೂ ಮುದ್ದೆ ಮಾಲು-1 ಮತ್ತು 2 ನೇದ್ದನ್ನು ಗುರುತಿಸಿಕೊಂಡಿರುತ್ತಾರೆ.

7) ಅಭಿಯೋಜನೆಯ ಮತ್ತು ಆರೋಪಿತನ ಪರ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು. ಕಡತದಲ್ಲಿ ಲಭ್ಯವಿರುವ ದಾಖಲಾತಿಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ತಿರ್ಮಾನಕ್ಕಾಗಿ ಬಂದಿರುತ್ತವೆಃ

<u>ಅಂಶ ನಂ.1:</u>ದಿನಾಂಕ 07-04-2019 ರಂದು ಸಂಜೆ 05-45 ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸ ಠಾಣೆಯ ವ್ಯಾಪ್ತಿಯ ಹೊಳಲು ಗ್ರಾಮದ ಎ.ಕೆ. ಕಾಲೋನಿಯ ರಸ್ತೆಯ ಬದಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಕಾನೂನು ಬಾಹಿರವಾಗಿ ಅವನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡಿ ಮತ್ತು ಅಕ್ರಮ ದಾಸ್ತಿನುಮಾಡಿ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 32 ಕೆ.ಇ. ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

<u>ಅಂಶ ನಂ.2:</u> ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಯಾವುದೇ ಪರವಾನಿಗೆ ಪಡೆಯದೇ ಮದ್ಯ ಮಾರಾಟ ಮಾಡಿರುವುದು ಅನಧಿಕೃತ ಎಂದು ಗೊತ್ತಿದ್ದು ಅವುಗಳನ್ನು ಮಾರಾಟ ಮಾಡುತ್ತಿದ್ದಾಗ ಸಿಕ್ಕಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 34 ಕೆ.ಇ. ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

<u>ಅಂಶ ನಂ.3</u>: ಆದೇಶ ಏನು ?

8) ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ *1:-* ನಕಾರಾತ್ಮಕ

ಅಂಶ *2:-* ನಕಾರಾತ್ಮಕ

ಅಂಶ *3:-* ಈ ಕೆಳಗಿನ ಕಾರಣಗಳಿಗಾಗಿ ಅಂತಿಮ ಆದೇಶದಂತೆ.

## ಕಾರಣಗಳು

9) ಅಂಶ ನಂ-1 ಮತ್ತು 2:- ಅಂಶ 1 ಮತ್ತು 2 ಇವುಗಳು ಒಂದೆ ರೀತಿಯ ಚರ್ಚೆಯ ವಿಷಯಗಳನ್ನು ಹೊಂದಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗಾಗಿ ತೆಗೆದುಕೊಳ್ಳಲಾಯಿತು. ಅಭಿಯೋಜನೆಯ ಪ್ರಕಾರ,

ದಿನಾಂಕ 07-04-2019 ರಂದು ಸಂಜೆ 05-45 ಗಂಟೆ ಸುಮಾರಿಗೆ ಹಿರೇಹಡಗಲಿ ಪೊಲೀಸ ಠಾಣೆಯ ವ್ಯಾಪ್ತಿಯ ಹೊಳಲು ಗ್ರಾಮದ ಎ.ಕೆ. ಕಾಲೋನಿಯ ರಸ್ತೆಯ ಬದಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನು ಸರ್ಕಾರದಿಂದ ಯಾವುದೇ ಪರವಾನಗಿ ಇಲ್ಲದೆ ಅನಧಿಕೃತವಾಗಿ ಮಧ್ಯ ಸಂಗ್ರಹಿಸಿ ಕಾನೂನು ಬಾಹಿರವಾಗಿ ಮಾರಾಟ ಮಾಡುತ್ತಿದ್ದು, ಚಾಸಾ-1 ರವರು ಪಂಚರು ಹಾಗೂ ಸಿಬ್ಬಂದಿಯವರೊಡನೆ ದಾಳಿ ಮಾಡಿದಾಗ, ಸದರಿ ಸ್ಥಳದಲ್ಲಿ ಇದ್ದಂತಹ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಮಾಲನ್ನು ಪರಿಶೀಲನೆ ಮಾಡಿ ನೋಡಲಾಗಿ ಅದರಲ್ಲಿ ಒಟ್ಟು ಮದ್ಯದ ಬೆಲೆ ರೂ.955/- ಮಧ್ಯವಿದ್ದು, ಚಾಸಾ-1 ರವರು ಪಂಚರ ಸಮಕ್ಷಮ ಸದರಿ ಅಕ್ರಮ ಮಧ್ಯವನ್ನು ವಶಪಡಿಸಿಕೊಂಡಿದ್ದು ಮತ್ತು ಸರ್ಕಾರದಿಂದ ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ ಮಧ್ಯದವನ್ನು ಮಾರಾಟ ಮಾಡುವುದು ಅಪರಾಧ ಎಂದು ಗೊತ್ತಿದ್ದರೂ ಸಹ ಅನಧಿಕೃತವಾಗಿ ಒಟ್ಟು ಮದ್ಯದ ಬೆಲೆ ರೂ.955/- ಮಧ್ಯವಿದ್ದು, ಅಕ್ರಮ ಮಧ್ಯವನ್ನು ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವುದು ಅಪರಾಧವಾಗಿರುತ್ತದೆ.

**10)** ತನ್ನ ಪ್ರಕರಣವನ್ನು ಸಾಬೀತುಪಡಿಸಲು ಅಭಿಯೋಜನೆಯು ತನ್ನ ಪರವಾಗಿ ಫ್ರಾಸಾ–1 ರಿಂದ ಫ್ರಾಸಾ–04 ಅಂತಾ, ವಿಚಾರಣೆ ಮಾಡಿ ಮತ್ತು ನಿಪಿ1 ರಿಂದ 3 ಹಾಗೂ ಮುದ್ದೆ ಮಾಲು–1 ಮತ್ತು 2 ನೇದ್ದನ್ನು ಗುರುತಿಸಿಕೊಂಡಿರುತ್ತಾರೆ.

**11)** ಚಾಸಾ 6 ರವರನ್ನು ಫ್ರಾಸಾ.1 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅರೋಪಿತನ ಪರಿಚಯ ತನಗೆ ಇದೆ ಆತನು ತಮ್ಮ ಊರಿನವನು, ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ, ಯಾವುದೇ ಸ್ವತ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ಸುಮಾರು 8 ವರ್ಷಗಳ ಹಿಂದೆ ತಾನು ಹಿರೇಹಡಗಲಿ ಗ್ರಾಮದ ಸಂತೆಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದಾಗ ಪೊಲೀಸರು ತನ್ನನ್ನು ಕರೆದು ಪೋಲಿಸರು 1 ಬಿಳಿ ಹಾಳೆಗೆ ಸಹಿ ಮಾಡು ಎಂದಿದ್ದಕ್ಕೆ ತಾನು ಸಹಿ ಮಾಡಿರುತ್ತೇನೆ, ಇದಲ್ಲದೆ ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ನಿ.ಪಿ.01 ಮತ್ತು 02 ರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**12)** ಚಾಸಾ 4 ರವರನ್ನು ಫ್ರಾಸಾ.2 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2019 ರ ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ತಾನು ಮತ್ತು ಚಾ.ಸಾ.02 ಮತ್ತು 03 ರವರು ಹೊಳಲು ಗ್ರಾಮದ ಗಾಂಧಿ ಚೌಕ ಹತ್ತಿರ ಗಸ್ತು ಕರ್ತವ್ಯದಲ್ಲಿರುವಾಗ ಚಾ.ಸಾ.01 ರವರು ತಮ್ಮನ್ನು ಕರೆದು ಹೊಳಲು ಗ್ರಾಮದ **AK** ಕಾಲೋನಿಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ

ಹೋಗಬೇಕೆಂದು ತಿಳಿಸಿರುತ್ತಾರೆ. ಆಗ ಚಾ.ಸಾ.01 ರವರು ಚಾ.ಸಾ.02 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಅದರಂತೆ ಚಾ.ಸಾ.02 ರವರು ಚಾ.ಸಾ.05 ಮತ್ತು 06 ರವರನ್ನು ಕರೆದುಕೊಂಡು ಬಂದು ಚಾ.ಸಾ.01 ರವರು ಮುಂದೆ ಹಾಜರುಪಡಿಸಿರುತ್ತಾರೆ. ಆಗ ಚಾ.ಸಾ.01 ರವರು ಸದರಿ ಪಂಚರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ಸದರಿ ಪಂಚರು ಒಪ್ಪಿದ್ದರಿಂದ ಸಂಜೆ.06.35 ಗಂಟೆಗೆ ಚಾ.ಸಾ.01 ರವರೊಂದಿಗೆ ತಾನು ಮತ್ತು ಚಾ.ಸಾ.2, 3 ಹಾಗೂ ಪಂಚರು ಸೇರಿ ದ್ವಿಚಕ್ರ ವಾಹನಗಳಲ್ಲಿ ಹೊಳಲು ಗ್ರಾಮದ ಪಾಡುರಂಗ ದೇವಸ್ಥಾನದ ಹತ್ತಿರ ಹೋಗಿ ಮೋಟರ ಸೈಕಲಗಳನ್ನು ನಿಲ್ಲಿಸಿ ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ AK ಕಾಲೋನಿಯ ರಸ್ತೇಯ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡೆಸಿಕೊಂಡು ಸಂಜೆ.05.45 ಗಂಟೆಗೆ ಪಂಚರ ಸಮಕ್ಷಮ ತಾವು ಆತನ ಮೇಲೆ ದಾಳಿ ಮಾಡಿರುತ್ತೇವೆ. ಆಗ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳದಲ್ಲಿ ಇದ್ದ ಜನರು ತಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಮತ್ತು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ತಮ್ಮ ಕೈಗೆ ಸಿಗದೇ ಓಡಿ ಹೋಗಿರುತ್ತಾನೆ. ಆಗ ತಾವು ಓಡಿ ಹೋದವರನ್ನು ಹಿಡಿಯಲು ಪ್ರಯತ್ನಿಸಲಾಗಿ ಅವರು ನಮಗೆ ಸಿಗಲಿಲ್ಲ ಆಗ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಮ್.ಎಲ್.ನ ಹೈವೆ ಫೈನ ವಿಸ್ಕೀಯ 39 ಟೆಟ್ರಾಪ್ಯಾಕಗಳು ದೊರೆತಿರುತ್ತವೆ. ನಂತರ ಸ್ಥಳದಲ್ಲಿ ಇದ್ದ ಲಕ್ಕನಗೌಡರ ಹನುಮಂತ ತಂದೆ ಲಕ್ಕನಗೌಡ ಇವರನ್ನು ಮಧ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೆಂದ್ರಪ್ಪ ತಂದೆ ನಿಂಗಪ್ಪ ಸಾಃಹೊಳಲು

ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ಚಾ.ಸಾ.01 ರವರು ಪಂಚರ ಸಮಕ್ಷಮ ಸದರಿ ಮಧ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡು ಮತ್ತು ಸ್ಥಳದಲ್ಲಿ ಓಡಿ ಹೋದ ವ್ಯಕ್ತಿ ಬಿಟ್ಟು ಹೋಗಿದ್ದ ನಗದು ಹಣ ರೂ.315/- ಗಳನ್ನು ವಶಕ್ಕೆ ಪಡೆದು ಸಂಜೆ.05.45 ರಿಂದ 06.30 ಗಂಟೆಯವರೆಗೆ ಚಾ.ಸಾ.01 ರವರು ಪಂಚರ ಸಮಕ್ಷಮ ಪಂಚನಾಮೆ ಜರೂಗಿಸಿರುತ್ತಾರೆ. ತದನಂತರ ಚಾ.ಸಾ.01 ರವರು ಸ್ಥಳದಲ್ಲಿ ದೊರೆತ ಮಧ್ಯದ ಪೌಚಗಳು, ನಗದು ಹಣ ಹಾಗೂ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾ.ಸಾ.09 ರವರಿಗೆ ಓಡಿ ಹೋದ ವ್ಯಕ್ತಿಯ ವಿರುದ್ಧ ದೂರು ಸಲ್ಲಿಸಿರುತ್ತಾರೆ, ಸದರಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**13).** ಫ್ರಾಸಾ 2 ರವರ ತಮ್ಮ ಪಾಟೀಸವಾಲಿನಲ್ಲಿ ಯಾವ ಸೈಕಲ ಮೋಟರ ಮೇಲೆ ದಾಳಿ ಮಾಡಲು ಹೋಗಿರುತ್ತೇವೆ ಮತ್ತು ಸದರಿ ಸೈಕಲ ಮೋಟರಗಳ ವಾಹನ ಸಂಖ್ಯೆಯನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ, ನಾವು ಮರೆಮಾಚಿ ನಿಂತು ನೋಡಿದಾಗ ದಾಳಿ ಮಾಡಿದ ಸ್ಥಳದಲ್ಲಿ 4 ರಿಂದ 5 ಜನ ಇದ್ದರು, ಆರೋಪಿತ ಓಡಿ ಹೋದಾಗ ಆತನನ್ನು ಹಿಡಿಯಲು ನಾನು ಮತ್ತು ಚಾ.ಸಾ.3 ರವರು ಓಡಿ ಹೋಗಿರುತ್ತೇವೆ, ಆರೋಪಿತನು ದಕ್ಷಿಣ ದಿಕ್ಕಿಗೆ **AK** ಕಾಲೋನಿಯ ಒಳಗೆ ಓಡಿ ಹೋಗಿರುತ್ತಾನೆ, ಓಡಿ ಹೋದಂತಹ ಸಾರ್ವಜನಿಕರನ್ನು ಹಿಡಿಯುವ ಪ್ರಯತ್ನ ಮಾಡಿರುವುದಿಲ್ಲ, **AK** ಕಾಲೋನಿಯಲ್ಲಿ ಒಂದು ಪೆಟ್ಟಿಗೆ ಅಂಗಡಿಯಲ್ಲಿ ಮುದ್ದೆಮಾಲನ್ನು ಮಾರುತ್ತಿದ್ದು ಆ ಅಂಗಡಿ ಯಾವುದು ಎಂದು ಹೇಳಲು ಬರುವುದಿಲ್ಲ, ಮುದ್ದೆಮಾಲಿನಂತರ ಟೆಟ್ರಾಪ್ಯಾಕಗಳು ಹೊರಗಡೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ, ರೂ.315/- ನ್ನು ಆರೋಪಿತನು ಪೆಟ್ಟಿಗೆ ಅಂಗಡಿಯಲ್ಲಿ ಮುದ್ದೆ ಮಾಲಿನ ಪಕ್ಕದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ, ಎಷ್ಟು ಮುಖಬೆಲೆಯ

ಮತ್ತು ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲು ಆಗುವುದಿಲ್ಲ, ಪಂಚನಾಮೆಯನ್ನು ಚಾ.ಸಾ.1 ರವರು ಬರೆದಿರುತ್ತಾರೆ, ಆ ದಿನ ಸಂಜೆ.06.30 ಕ್ಕೆ ಕತ್ತಲಾಗಿರುತ್ತದೆ ಎಂದರೆ ಸರಿ, ಸಾಕ್ಷಿಯು ನಂತರ ಆ ದಿನ ಬಿದಿ ದೀಪದ ಬೆಳಕು ಇತ್ತು, ಬೀದಿ ದೀಪದ ಕೆಳಗೆ ಪಂಚನಾಮೆಯನ್ನು ಬರೆದಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುವುದಿಲ್ಲ, ಆ ಜಾಗದಲ್ಲಿ ವಿದ್ಯುತ ಕಂಬ ಹಾಗೂ ದೀಪ ಇರುವುದಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**14)** ಚಾಸಾ1 ರವರನ್ನು ಫ್ರಾಸಾ.3 ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 07-04-2019 ರಂದು ಸಂಜೆ.05.15 ಗಂಟೆಗೆ 2019 ರ ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ 11 ನೇ ಸೆಕ್ಟರ ಅಧಿಕಾರಿಯಾಗಿದ್ದು ಆಗ ತಾನು ಮತ್ತು ಚಾ.ಸಾ.2 ರಿಂದ 04 ರವರೊಂದಿಗೆ ಹೊಳಲು ಗ್ರಾಮದ ಗಾಂಧಿ ವೃತ್ತದ ಹತ್ತಿರ ಗಸ್ತು ಕರ್ತವ್ಯದಲ್ಲಿದ್ದಾಗ ಹೊಳಲು ಗ್ರಾಮದ ಪಾಡುರಂಗ ನಗರದ AK ಕಲೋನಿಯ ಹತ್ತಿರ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ. ಆಗ ತಾನು ಚಾ.ಸಾ.02 ರಿಂದ 04 ರವರನ್ನು ಕರೆದು ಅವರಿಗೆ ತನಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತೇನೆ. ಆಗ ತಾನು ಚಾ.ಸಾ.02 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಅದರಂತೆ ಚಾ.ಸಾ.02 ರವರು ಚಾ.ಸಾ.05 ಮತ್ತು 06 ರವರನ್ನು ಕರೆದುಕೊಂಡು ಬಂದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆಗ ತಾನು ಸದರಿ ಪಂಚರಿಗೆ ತನಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ಸದರಿ ಪಂಚರು ಒಪ್ಪಿದ್ದರಿಂದ

ತಾವುಗಳು ಸಂಜೆ.05.45 ಗಂಟೆಗೆ ದ್ವಿಚಕ್ರ ವಾಹನಗಳಲ್ಲಿ ತಾನು ಮತ್ತು ಚಾ.ಸಾ.2, 3 ಹಾಗೂ ಪಂಚರು ಸೇರಿ ದ್ವಿಚಕ್ರ ವಾಹನಗಳಲ್ಲಿ ಹೊಳಲು ಗ್ರಾಮದ ಪಾಡುರಂಗ ದೇವಸ್ಥಾನದ ಹತ್ತಿರ ಹೋಗಿ ಮೋಟರ ಸೈಕಲಗಳನ್ನು ನಿಲ್ಲಿಸಿ ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ AK ಕಾಲೋನಿಯ ರಸ್ತೇಯ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡೆಸಿಕೊಂಡು ಸಂಜೆ.05.45 ಗಂಟೆಗೆ ಪಂಚರ ಸಮಕ್ಷಮ ತಾವು ಆತನ ಮೇಲೆ ದಾಳಿ ಮಾಡಿರುತ್ತೇವೆ, ಆಗ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳದಲ್ಲಿ ಇದ್ದ ಜನರು ತಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಮತ್ತು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ತಮ್ಮ ಕೈಗೆ ಸಿಗದೇ ಓಡಿ ಹೋಗಿರುತ್ತಾನೆ, ಆಗ ತಾವು ಓಡಿ ಹೋದವರನ್ನು ಹಿಡಿಯಲು ಪ್ರಯತ್ನಿಸಲಾಗಿ ಅವರು ತಮಗೆ ಸಿಗಲಿಲ್ಲ ಆಗ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಮ್.ಎಲ್.ನ ಹೈವೆ ಫೈನ ವಿಸ್ಕೀಯ 39 ಟೆಟ್ರಾಪ್ಯಾಕಗಳು ದೊರೆತಿರುತ್ತವೆ, ನಂತರ ಸ್ಥಳದಲ್ಲಿ ಇದ್ದ ಲಕ್ಕನಗೌಡರ ಹನುಮಂತ ತಂದೆ ಲಕ್ಕನಗೌಡ ಇವರನ್ನು ಮಧ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೆಂದ್ರಪ್ಪ ತಂದೆ ನಿಂಗಪ್ಪ ಸಾಃಹೊಳಲು ಎಂದು ತಿಳಿಸಿರುತ್ತಾರೆ, ನಂತರ ಸ್ಥಳದಲ್ಲಿ ತಾನು ಪಂಚರ ಸಮಕ್ಷಮ ಸದರಿ ಮಧ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡು ಮತ್ತು ಸ್ಥಳದಲ್ಲಿ ಓಡಿ ಹೋದ ವ್ಯಕ್ತಿ ಬಿಟ್ಟು ಹೋಗಿದ್ದ ನಗದು ಹಣ ರೂ.315/- ಗಳನ್ನು ವಶಕ್ಕೆ ಪಡೆದು ಸಂಜೆ.05.45 ರಿಂದ 06.30 ಗಂಟೆಯವರೆಗೆ ಚಾ.ಸಾ.01 ರವರು ಪಂಚರ ಸಮಕ್ಷಮ ಪಂಚನಾಮೆ ಜರೂಗಿಸಿರುತ್ತೇನೆ, ಸದರಿ ಮಧ್ಯದ ಪೌಚನ್ನು ಮತ್ತು ಹಣವನ್ನು ಸೀಲು ಮಾಡಿ

ಪಂಚರ ಮತ್ತು ತನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ, ತದನಂತರ ತಾನು ಸ್ಥಳದಲ್ಲಿ ದೊರೆತ ಮಧ್ಯದ ಪೌಚಗಳು, ನಗದು ಹಣ ಹಾಗೂ ಪಂಚನಾಮೆಯೊಂದಿಗೆ ಸಂಜೆ.**07.30** ಗಂಟೆಗೆ ಠಾಣೆಗೆ ಬಂದು ಚಾ.ಸಾ.**09** ರವರಿಗೆ ಓಡಿ ಹೋದ ವ್ಯಕ್ತಿಯ ವಿರುದ್ಧ ದೂರು ಸಲ್ಲಿಸಿರುತ್ತೇನೆಂದು, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

**15).** ಪ್ರಾಸಾ **3** ರವರ ತಮ್ಮ ಪಾಟೀಸವಾಲಿನಲ್ಲಿ ನಮ್ಮ ಬೀಟ್ ಕರ್ತವ್ಯದ ಬಗ್ಗೆ ಠಾಣಾ ವಹಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ, ಈ ಬಗ್ಗೆ ಠಾಣಾ ವಹಿಯ ಪ್ರತಿಯಾಗಲಿ ಅಥವಾ ಬೇರೆ ದಾಖಲೆ ಆಗಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಪಂಚರನ್ನು ಕರೆದುಕೊಂಡು ಬಂದಾಗ ಸಮಯ ಸಂಜೆ.**06.00** ಗಂಟೆ ಆಗಿರುತ್ತದೆ,ನಾವು ಮರೆಮಾಚಿ ನಿಂತ ಜಾಗವು ನಿರ್ದಿಷ್ಟವಾಗಿ ನನಗೆ ಗೊತ್ತಿರುವುದಿಲ್ಲ, ನಾನು ಮರೆಮಾಚಿ ನಿಂತಾಗ ಇಬ್ಬರು ಪಂಚರು ಮತ್ತು ಮೂವರು ಸಿಬ್ಬಂದಿಗಳು ಇದ್ದೇವು, ಆಗ ಸುಮಾರು ಸಂಜೆ.**06.00** ಗಂಟೆ ಆಗಿರುತ್ತದೆ, ನಾವು ಮರೆಮಾಚಿ ನಿಂತ ಜಾಗದಿಂದ ದಾಳಿ ಮಾಡಿದ ಜಾಗವು ಸುಮಾರು **5-6** ಮೀಟರ ದೂರ ಇರುತ್ತದೆ, ನಾವು ಮರೆಮಾಚಿ ನಿಂತು ನೋಡಿದಾಗ ಆರೋಪಿತನು ಒಬ್ಬನೇ ಇದ್ದು ಯಾರೂ ಸಾರ್ವಜನಿಕರು ಇರಲಿಲ್ಲ, ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲುಗಳು ಹೊರಗಡೆ ಸಿಗುತ್ತವೆ ಎಂದರೆ ಬ್ರ್ಯಾಂಡಿ ಅಂಗಡಿಯಲ್ಲಿ ಸಿಗುತ್ತವೆ, ಜಪ್ತು ಪಡೆಸಿದಂತಹ ಪೌಚಗಳ ಮೇಲೆ ಪಂಚರ ಸಹಿಯಾಗಲಿ ನಮ್ಮ ಸಹಿಯಾಗಲಿ ಇರುವುದಿಲ್ಲ, ಪಂಚನಾಮೆಯನ್ನು ಚಾ.ಸಾ.**02** ರವರು ಲ್ಯಾಪಟಾಪಿನಲ್ಲಿ ಗಣಕೀಕೃತ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

**16)** ಚಾಸಾ **2** ರವರನ್ನು ಪ್ರಾಸಾ.**4** ಎಂದು ವಿಚಾರಣೆ ಮಾಡಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ **07-04-2019** ರಂದು ಹೊಳಲು ಗ್ರಾಮದ ಗಾಂಧಿ ಸರ್ಕಲ ಹತ್ತಿರ ತಾನು ಚಾ.ಸಾ.**01, 03** ಮತ್ತು **04** ರವರು ಸಂಜೆ.**05.00** ಗಂಟೆ ಸುಮಾರಿಗೆ ಲೋಕಸಭಾ ಚುನಾವಣೆ ನಿಮಿತ್ಯ ಗಸ್ತು ಕರ್ತವ್ಯದಲ್ಲಿ ಇದ್ದೇವು, ಆಗ ಚಾ.ಸಾ.**01** ರವರಿಗೆ ಹೊಳಲು ಗ್ರಾಮದ ಎ.ಕೆ. ಕಾಲೋನಿಯಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತಾರೆ, ಆಗ ಚಾ.ಸಾ.**01** ರವರು ಸದರಿ ದಾಳಿಗೆ ಹೋಗಲು ತನಗೆ ಇಬ್ಬರು ಪಂಚರನ್ನು ಕರೆತರಲು ತಿಳಿಸಿರುತ್ತಾರೆ ಅದರಂತೆ ತಾನು ಚಾ.ಸಾ.**05** ಮತ್ತು **06** ರವರನ್ನು ಕರೆದುಕೊಂಡು ಬಂದು ಚಾ.ಸಾ.**01** ರವರ ಮುಂದೆ ಹಾಜರುಪಡಿಸಿರುತ್ತೇನೆ, ಆಗ ಚಾ.ಸಾ.**01** ರವರು ಪಂಚರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ತಾನು ಮತ್ತು ಚಾ.ಸಾ.**03, 04** ಹಾಗೂ ಪಂಚರು ಸೇರಿ ಚಾ.ಸಾ.**01** ರವರೊಂದಿಗೆ ತಮ್ಮ ದ್ವಿಚಕ್ರ ವಾಹನದಲ್ಲಿ ಸಂಜೆ.**05.35** ಗಂಟೆಗೆ ತಾವು ಗಸ್ತು ಕರ್ತವ್ಯದಲ್ಲಿ ಇದ್ದ ಸ್ಥಳದಿಂದ ಹೊರಟು ಹೊಳಲು ಗ್ರಾಮದ ಪಾಡುರಂಗ ನಗರದ ಹತ್ತಿರ ಹೋಗಿ ತಮ್ಮ ವಾಹನಗಳನ್ನು ನಿಲ್ಲಿಸಿ ಕೆಳಗೆ ಇಳಿದು ಸ್ವಲ್ಪ ದೂರದಿಂದ ಮರೆಮಾಚಿ ನೋಡಲಾಗಿ ಎ.ಕೆ. ಕಾಲೋನಿಯ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಒಂದು ಪ್ಲಾಸ್ಟಿಕ ಚೀಲದಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುವುದನ್ನು ಖಾತ್ರಿ ಪಡೆಸಿಕೊಂಡು ಸಂಜೆ **05.45** ಗಂಟೆಗೆ ಸದರಿ ವ್ಯಕ್ತಿಗಳ ಮೇಲೆ ದಾಳಿ ಮಾಡಿರುತ್ತೇನೆ, ಆಗ ತಾವು

ದಾಳಿ ಮಾಡುತ್ತಿದ್ದಂತೆ ಅಲ್ಲಿ ಸೇರಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ಓಡಿ ಹೋಗಿರುತ್ತಾನೆ, ಆಗ ತಾವು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಲಾಗಿ ಆತನು ತಮ್ಮ ಸಿಗದೇ  ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ, ಆಗ ಸದರಿ ಸ್ಥಳದಲ್ಲಿ ಇದ್ದ ಒಂದು ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ **90** ಎಮ್.ಎಲ್.ನ ಹೈವೆ ಫೈನ ವಿಸ್ಕೀಯ **39** ಪೌಚಗಳು ದೊರೆತಿರುತ್ತವೆ,  ಆಗ ಚಾ.ಸಾ.**01** ರವರು ಮಧ್ಯ ಮರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಮತ್ತು ಸ್ಥಳದಲ್ಲಿ ಇದ್ದ ಲಕ್ಕನಗೌಡರ ಹನುಮಂತ ತಂದೆ ಲಕ್ಕಪ್ಪರವರಿಗೆ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೇಂದ್ರಪ್ಪ ತಂದೆ ನಿಂಗಪ್ಪ ಸಾಃಹೊಳಲು ಗ್ರಾಮ ಪಾಡುರಂಗ ನಗರ ಎಂದು ತಿಳಿಸಿರುತ್ತಾನೆ. ಸ್ಥಳದಲ್ಲಿ ಚಾ.ಸಾ.**01** ರವರು ಪರಿಶೋದನೆ ಮಾಡಲಾಗಿ ಒಂದು ಕೈ ಚೀಲದಲ್ಲಿ **315/-** ನಗದು ಹಣ ದೊರೆತಿರುತ್ತದೆ, ಸದರಿ ಪೌಚಗಳನ್ನು ಮತ್ತು ನಗದು ಹಣ ರೂ.**315/-** ರೂಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಜಪ್ತುಪಡೆಸಿಕೊಂಡಿರುತ್ತೇವೆ, ಸದರಿ ಮಧ್ಯದ ಪೌಚಗಳನ್ನು ರಸಾಯನಿಕ ಪರೀಕ್ಷೆಗಾಗಿ ಒಂದು ಪ್ರತ್ಯೇಕ ಚೀಲದಲ್ಲಿ ಹಾಕಿ, **SHO** ಅಂತ ಸೀಲು ಮಾಡಿ,  ಚಾ.ಸಾ.**01** ಮತ್ತು ಪಂಚರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಸಂಜೆ.**05.45** ರಿಂದ **06.30** ಗಂಟೆಯವರೆಗೆ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ ಮಧ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೇವೆ, ನಂತರ ಠಾಣೆಗೆ ವಾಪಸ್ಸು ಬಂದು ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿಯೇ ಮಧ್ಯದ ಚೀಲವನ್ನು ಬಿಟ್ಟು ಓಡಿ ಹೋಗಿದ್ದ ವ್ಯಕ್ತಿಯ ವಿರುದ್ಧ ಚಾ.ಸಾ.**01** ರವರು

ಚಾ.ಸಾ.9 ರವರಿಗೆ ದೂರು ಸಲ್ಲಿಸಿರುತ್ತಾರೆ, ಸದರಿ ಸಾಕ್ಷಿಯು ಅಭಿಯೋಜನೆಗೆ ಸಾಕ್ಷಿಯನ್ನು ನುಡಿದಿರುತ್ತಾರೆ.

17). ಫ್ರಾಸಾ 4 ರವರು ಅವರ ಪಾಟೀಸವಾಲಿನಲ್ಲಿ ನಾವು ಯಾವ ಯಾವ ಸಂಖ್ಯೆಯ ದ್ವಿಚಕ್ರ ವಾಹನದಲ್ಲಿ ಪಾಂಡುರಂಗ ನಗರಕ್ಕೆ ಹೋಗಿರುತ್ತೇವೆ ಎಂದು ನನಗೆ ನೆನಪು ಇರುವುದಿಲ್ಲ, ನಾವು ನಿಂತು ನೋಡಿದ ಜಾಗಕ್ಕೂ ಆರೋಪಿತ ಮಾರಾಟ ಮಾಡುತ್ತಿದ್ದ ಜಾಗಕ್ಕೂ 200 ಮೀಟರ ದೂರ ಇತ್ತು, ಅಲ್ಲಿ 3-4 ಜನ ಸಾರ್ವಜನಿಕರು ಇದ್ದರು, ಸಾರ್ವಜನಿಕರನ್ನು ಹಿಡಿಯಲು ಪ್ರಯತ್ನ ಮಾಡಿರುವುದಿಲ್ಲ, ಆರೋಪಿತನು ಯಾವ ದಿಕ್ಕಿನ ಕಡೆಗೆ ಓಡಿ ಹೋದ ಎಂದು ಮುಸ್ಸಂಜೆ ಆಗಿದ್ದರಿಂದ ನೆನಪು ಇರುವುದಿಲ್ಲ, 315/- ರೂಪಾಯಿ ನಾವು ದಾಳಿ ಮಾಡಿದ ಸ್ಥಳದಲ್ಲಿ ಕೈಚೀಲದಲ್ಲಿ ಇತ್ತು, 315/- ರೂಪಾಯಿ ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲು ನೆನಪು ಇರುವುದಿಲ್ಲ, ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ, ಪಂಚನಾಮೆಗೆ ಸಂಜೆ.06.30 ಕ್ಕೆ ನಾನು ಸಹಿಯನ್ನು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

18). ಈ ಪ್ರಕರಣದ ದಾಳಿ ಮಾಡಿ ದೂರನ್ನು ಸಲ್ಲಿಸಿದಂತಹ ಫ್ರಾಸಾ 3 ರವರು ಮತ್ತು ದಾಳಿಯಲ್ಲಿ ಭಾಗವಹಿಸಿದ ಫ್ರಾಸಾ 2 ಮತ್ತು 4 ರವರ ಸಾಕ್ಷ್ಯಗಳಲ್ಲಿ ತುಂಬ ವ್ಯತ್ಯಾಸವಿರುತ್ತದೆ. ಫ್ರಾಸಾ 2 ರವರು ಅವರ ಮುಖ್ಯ ವಿಚಾರಣೆಯಲ್ಲಿ ಸಂಜೆ 5-45 ಗಂಟೆಗೆ ಪಂಚರ ಸಮಕ್ಷಮ ಆರೋಪಿತನ ಮೇಲೆ ದಾಳಿಮಾಡಿರುತ್ತೇವೆ ಎಂದು ನುಡಿದಿದ್ದು ಪಾಟೀಸವಾಲಿನಲ್ಲಿ ಪ್ರಕರಣದ ಮಾಹಿತಿ ನಮಗೆ ಸಂಜೆ 6-30 ಕ್ಕೆ ಲಭ್ಯವಾಗಿರುತ್ತದೆ ಎಂದು ನುಡಿದಿರುತ್ತಾರೆ, ಹೀಗೇಯೇ ಫ್ರಾಸಾ 3 ರವರು ಪಂಚನಾಮೆಯನ್ನು ಸಂಜೆ 5-45 ರಿಂದ 6-30 ಕ್ಕೆ ಮಾಡಿರುತ್ತೇವೆ ಎಂದು ಮುಖ್ಯ ವಿಚಾರಣೆಯಲ್ಲಿ ನುಡಿದಿದರೆ ಅವರ

ಪಾಟೀಸವಾಲಿನಲ್ಲಿ ಪಂಚರನ್ನು ಕರೆದುಕೊಂಡು ಬಂದಾಗ ಸಮಯ 6.00 ಗಂಟೆ ಆಗಿರುತ್ತದೆ ಎಂದು ನುಡಿದಿರುತ್ತಾರೆ ಇದರಿಂದಾಗಿ ಈ ಪ್ರಕರಣದ ಮಾಹಿತಿ ಮೊದಲು ಬಂದಿರುತ್ತದೆಯೋ ಅಥವಾ ಪಂಚರನ್ನು ಪಂಚನಾಮೆ ಶುರುವಾದ ನಂತರ ಕರೆದುಕೊಂಡು ಬಂದಿರುತ್ತಾರೋ ಅಥವಾ ಪಂಚನಾಮೆಯನ್ನು ಮಾಡಿದ ನಂತರ ಈ ಪ್ರಕರಣದ ಮಾಹಿತಿ ಬಂದು ಪಂಚರನ್ನು ಕರೆದುಕೊಂಡು ಬಂದಿರುತ್ತಾರೋ ಎಂಬುವುದು ಸಂಪೂರ್ವಾಗಿ ಗೊಂದಲಮಯವಾಗಿರುತ್ತದೆ.

19). ಪ್ರಾಸಾ 2 ರವರು ಮರೆಮಾಚಿ ನಿಂತು ನೋಡಿದಾಗ 4 ರಿಂದ 5 ಜನರು ಇದ್ದರು ಎಂದು ನುಡಿದಿದ್ದರೆ ದೂರುದಾರರಾದಂತಹ ಪ್ರಾಸಾ 3 ರವರು ನಾವು ಮರೆಮಾಚಿನಿಂತು ನೋಡಿದಾಗ ಆರೋಪಿತನು ಒಬ್ಬನೇ ಇದ್ದು ಯಾರು ಸಾರ್ವಜನಿಕರು ಇರಲಿಲ್ಲ ಎಂದು ನುಡಿದರೆ ಪ್ರಾಸಾ 4 ರವರು ಅವರ ಪಾಟೀಸವಾಲಿನಲ್ಲಿ ಅಲ್ಲಿ 3–4 ಸಾರ್ಜನಿಕರು ಕೃತ್ಯ ನಡೆದ ಸ್ಥಳದಲ್ಲಿ ಇದ್ದರು ಎಂದು ನುಡಿದಿದ್ದರಿಂದ ಹಾಗೂ ಪ್ರಾಸಾ 3 ರವರು ನಾವು ಮರೆಮಾಚಿನಿಂತ ಜಾಗವು ನಿರ್ದಿಷ್ಟವಾಗಿ ನನಗೆ ಗೊತ್ತಿರುವುದಿಲ್ಲ ನಾವು ಮರೆಮಾಚಿನಿಂತ ಜಾಗದಿಂದ ದಾಳಿ ಮಾಡಿದ ಜಾಗವು 5-6 ಮೀಟರ್ ದೂರ ಇರುತ್ತದೆ ಎಂದು ನುಡಿದದರೆ ಪ್ರಾಸಾ 4 ರವರು ನಾವು ನಿಂತು ನೋಡಿದ ಜಾಗಕ್ಕೂ ಆರೋಪಿತ ಮಾರಾಟ ಮಾಡುತ್ತಿದ್ದ ಜಾಗಕ್ಕೂ 200 ಮೀಟರ್ ದೂರ ಇತ್ತು ಅಭಿಯೋಜನೆಯೂ ಹೇಳಿದ ಹಾಗೆ ಸಾರ್ವಜನಿಕರು ಮದ್ಯವನ್ನು ಕೊಳ್ಳುತ್ತಿದ್ದರು ಎಂಬುವುದು ಸಂಶಯಸ್ಪದವಾಗಿರುತ್ತದೆ ಹಾಗೂ ಪ್ರಾಸಾ 2 ರವರು ಆರೋಪಿತ ಓಡಿ ಹೋದಾಗ ಆತನನ್ನು ಹಿಡಿಯಲು ನಾನು ಮತ್ತು ಚಾಸಾ 3 ರವರು ಓಡಿ ಹೋಗಿರುತ್ತೇವೆಂದು ನುಡಿದಿದ್ದು ಆದರೆ ಪ್ರಾಸಾ 3 ರವರು ಆರೋಪಿತನು ಓಡಿ ಹೋದಾಗ ನಮ್ಮ 3 ಜನ ಸಿಬ್ಬಂದಿ ಅವನನ್ನು ಹಿಡಿಯಲು ಪ್ರಯತ್ನ ಮಾಡಿರುತ್ತಾರೆ ಎಂದು

ನುಡಿದಿದ್ದರಿಂದ ದೂರುದಾರ ಮತ್ತು ಅವರೊಂದಿಗೆ ದಾಳಿಮಾಡಿದ ಸಹಾಯಕರ ಸಾಕ್ಷ್ಯವು ಒಂದಕ್ಕೊಂದು ತಾಳೆ ಆಗಿರುವುದಿಲ್ಲ.

**20).** ಫ್ರಾಸಾ **2** ರವರು ಓಡಿ ಹೋದಂತಹ ಸಾರ್ವಜನಿಕರನ್ನು ಹಿಡಿಯುವ ಪ್ರಯತ್ನ ಮಾಡಿರುವುದಿಲ್ಲ, **AK** ಕಾಲೋನಿಯಲ್ಲಿ ಒಂದು ಪೆಟ್ಟಿಗೆ ಅಂಗಡಿಯಲ್ಲಿ ಮುದ್ದೆಮಾಲನ್ನು ಮಾರುತ್ತಿದ್ದು ಆ ಅಂಗಡಿ ಯಾವುದು ಎಂದು ಹೇಳಲು ಬರುವುದಿಲ್ಲ, ಮುದ್ದೆಮಾಲಿನಂತರ ಟೆಟ್ರಾಪ್ಯಾಕಗಳು ಹೊರಗಡೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ, ಆರೋಪಿತನು ಬಿಟ್ಟು ಓಡಿ ಹೋದಂತಹ ರೂ.**315/-** ಎಷ್ಟು ಮುಖಬೆಲೆಯ ಮತ್ತು ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲು ಆಗುವುದಿಲ್ಲ ಎಂದು ನುಡಿದಿದ್ದರಿಂದ ಮುಂದುವರೆದು ಫ್ರಾಸಾ **2** ರವರು ಆ ದಿನ ಸಂಜೆ.**06.30** ಕ್ಕೆ ಕತ್ತಲಾಗಿರುತ್ತದೆ ಎಂದರೆ ಸರಿ, ಆ ದಿನ ಬೀದಿ ದೀಪದ ಬೆಳಕು ಇತ್ತು, ಬೀದಿ ದೀಪದ ಕೆಳಗೆ ಪಂಚನಾಮೆಯನ್ನು ಬರೆದಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ನುಡಿದಿದ್ದು ಸಂಜೆ **5-45** ರಿಂದ **6-30** ರ ವರೆಗೆ ಪಂಚನಾಮೆಯನ್ನು ಮಾಡಿದ ಪೂರಕವಾಗಿ ಕಚ್ಚಾ ನಕಾಶೆಯಲ್ಲಿ ಬೀದಿ ದೀಪದ ಚಿತ್ರಣವನ್ನು ತೋರಿಸಿರುವುದಿಲ್ಲ, ಈ ಎಲ್ಲಾ ಕಾರಣಗಳಿಂದಾಗಿ ಫ್ರಾಸಾ **2** ರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ.

**21).** ಫ್ರಾಸಾ **3** ರವರು ತಮ್ಮ ಪಾಟೀಸವಾಲಿನಲ್ಲಿ ನಮ್ಮ ಬೀಟ್ ಕರ್ತವ್ಯದ ಬಗ್ಗೆ ಠಾಣಾ ವಹಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ, ಈ ಬಗ್ಗೆ ಠಾಣಾ ವಹಿಯ ಪ್ರತಿಯಾಗಲಿ ಅಥವಾ ಬೇರೆ ದಾಖಲೆ ಆಗಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಪಂಚರನ್ನು, ನಾವು ಮರೆಮಾಚಿ ನಿಂತ ಜಾಗವು ನಿರ್ದಿಷ್ಟವಾಗಿ ನನಗೆ ಗೊತ್ತಿರುವುದಿಲ್ಲ, ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲುಗಳು ಹೊರಗಡೆ ಸಿಗುತ್ತವೆ

ಎಂದರೆ ಬ್ರ್ಯಾಂಡಿ ಅಂಗಡಿಯಲ್ಲಿ ಸಿಗುತ್ತವೆ, ಜಪ್ತು ಪಡೆಸಿದಂತಹ ಪೌಚಗಳ ಮೇಲೆ ಪಂಚರ ಸಹಿಯಾಗಲಿ ನಮ್ಮ ಸಹಿಯಾಗಲಿ ಇರುವುದಿಲ್ಲ ಎಂದು ನುಡಿದಿದ್ದರಿಂದ ಅವರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ.

22). ಫ್ರಾಸಾ 4 ರವರು ಅವರ ಪಾಟೀಸವಾಲಿನಲ್ಲಿ ನಾವು ಯಾವ ಯಾವ ಸಂಖ್ಯೆಯ ದ್ವಿಚಕ್ರ ವಾಹನದಲ್ಲಿ ಪಾಂಡುರಂಗ ನಗರಕ್ಕೆ ಹೋಗಿರುತ್ತೇವೆ ಎಂದು ನನಗೆ ನೆನಪು ಇರುವುದಿಲ್ಲ, ಮುದ್ದೆಮಾಲುಗಳ ಮೇಲೆ ಪಂಚರ ಮತ್ತು ಚಾಸಾ 1ರವರ ಸಹಿ ಇರುವುದಿಲ್ಲ, ಆರೋಪಿತನು ಯಾವ ದಿಕ್ಕಿನ ಕಡೆಗೆ ಓಡಿ ಹೋದ ಎಂದು ಮುಸ್ಸಂಜೆ ಆಗಿದ್ದರಿಂದ ನೆನಪು ಇರುವುದಿಲ್ಲ, ಜಪ್ತು ಮಾಡಿದ 315/- ರೂಪಾಯಿ ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲು ನೆನಪು ಇರುವುದಿಲ್ಲ ಎಂದು ನುಡಿದಿದ್ದರಿಂದ ಫ್ರಾಸಾ 4 ರವರ ಸಾಕ್ಷ್ಯದ ಮೇಲೆಯೂ ಸಹ ನಂಬಿಕೆ ಮೂಡಿರುವುದಿಲ್ಲ.

23). ಫ್ರಾಸಾ 3 ರವರು ದಾಳಿ ಮಾಡುವಾಗ ಮತ್ತು ಪಂಚನಾಮೆ ಮಾಡುವಾಗ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ, ಹೀಗಾಗಿ ಈ ಪ್ರಕರಣದ ದಾಳಿ ಮತ್ತು ಜಪ್ತುಕಾರ್ಯವು ನಡೆದಿರುವ ಅನುಮಾನ ಮೂಡುತ್ತದೆ.

24). ಫ್ರಾಸಾ 2 ರಿಂದ 4 ರವರು ತಮ್ಮ ಸಾಕ್ಷ್ಯದಲ್ಲಿ ಪಂಚರ ಸಮಕ್ಷಮ ಆರೋಪಿತನ ಮೇಲೆ ದಾಳಿಮಾಡಿ ಅವನು ಮಾರಾಟ ಮಾಡುತ್ತಿದ್ದ ಮಧ್ಯವನ್ನು ಪಂಚನಾಮೆ ಮಾಡಿರುತ್ತೇವೆ ಎಂದು ನುಡಿದಿದ್ದು, ಆದರೆ ಪಂಚರಾದಂತಹ ಫ್ರಾಸಾ 1 ರವರು ಅವರ ಮುಖ್ಯ ವಿಚಾರಣೆಯಲ್ಲಿ "ತನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ, ಯಾವುದೇ ಸ್ವತ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ಸುಮಾರು 8 ವರ್ಷಗಳ ಹಿಂದೆ ತಾನು ಹಿರೇಹಡಗಲಿ ಗ್ರಾಮದ ಸಂತೆಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದಾಗ ಪೊಲೀಸರು ತನ್ನನ್ನು ಕರೆದು

1 ಬಿಳಿ ಹಾಳೆಗೆ ಸಹಿ ಮಾಡು ಎಂದಿದ್ದಕ್ಕೆ ತಾನು ಸಹಿ ಮಾಡಿರುತ್ತೇನೆ, ಇದಲ್ಲದೆ ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ನಿ.ಪಿ.01 ಮತ್ತು 02 ರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆಂದು" ನುಡಿದಿದ್ದರಿಂದ ಪ್ರಾಸಾ 2 ರಿಂದ 4 ರವರು ಪಂಚರ ಸಮಕ್ಷಮ ಜಪ್ತುಕಾರ್ಯ ಮಾಡಿರುವುದಿಲ್ಲ ಎಂದು ಕಂಡು ಬಂದಿರುತ್ತದೆ, ಹೀಗಾಗಿ ಪ್ರಾಸಾ 2 ರಿಂದ 4 ರವರ ಸಾಕ್ಷ್ಯದ ಮೇಲೆ ನಂಬಿಕೆ ಮೂಡಿರುವುದಿಲ್ಲ ಹಾಗೂ ಅವರು ಮಾಡಿದ ಜಪ್ತುಕಾರ್ಯವು ಕಾನೂನು ಬಾಹಿರವಾಗಿರುತ್ತದೆ. ಪ್ರಾಸಾ 3 ರವರು ಮುದ್ದೆ ಮಾಲನ್ನು ಜಪ್ತು ಮಾಡುವಾಗ ಪೋಟೋ ಅಥವಾ ವೀಡಿಯೋಗಳನ್ನು ಸೆರೆಹಿಡಿದಿರುವುದಿಲ್ಲ ಹೀಗಾಗಿ ಈ ಪ್ರಕರಣದ ಜಪ್ತು ಕಾರ್ಯವು ನಿಜವಾಗಲು ನಡೆದಿರುತ್ತದೆಯೇ ಎಂಬ ಅನುಮಾನ ಮೂಡಿಸಿರುತ್ತದೆ.

25). ಈ ಪ್ರಕರಣದಲ್ಲಿ ತನಿಖಾಧಿಕಾರಿಯವರ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ ಹಾಗೂ ಮು.ಮ.1 ರಲ್ಲಿ ಇದ್ದ ಮದ್ಯ ಏನು ಅಯಿತು ಎಂದು ಅಂತಿಮವರದಿಯಲ್ಲಿ ಎಲ್ಲಿಯೂ ನಮೂದು ಮಾಡಿರುವುದಿಲ್ಲ, ಇದರಿಂದಾಗಿ ಈ ಪ್ರಕರಣವು ಸಂಪೂರ್ಣವಾಗಿ ಕಟ್ಟು ಕಥೆಯಿಂದ ಕೂಡಿರುತ್ತದೆ ಎಂದು ತಿಳಿದು ಬರುತ್ತದೆ.

26) ಅಭಿಯೋಜನೆಯು ಈ ಪ್ರಕರಣವನ್ನು ಸಾಭೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಮೇಲೆ ಚರ್ಚಿಸಲಾದ ಅಂಶಗಳಲ್ಲಿ ಸಾಕಷ್ಟು ಅನುಮಾನಗಳಿದ್ದು ಆರೋಪಿತನೆ ನಿಸ್ಸಂದೇಹವಾಗಿ ಈ ಪ್ರಕರಣದಲ್ಲಿ ಆಪಾಧಿಸಲಾದ ಅಪರಾಧವನ್ನು ಮಾಡಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ದೋಷಾರೋಪಣೆಯನ್ನು ಸಾಭೀತು ಪಡಿಸಲು ವಿಚಾರಣೆ ಮಾಡಿದ ಸ್ವತಂತ್ರ ಸಾಕ್ಷಿಯೂ ಅಭಿಯೋಜನೆಗೆ ವ್ಯತಿರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಕೇವಲ ಪೋಲಿಸ್ ಸಿಬ್ಬಂದಿಗಳ ಸಾಕ್ಷ್ಯದ

ಮೇಲೆ ಆರೋಪಿತನ ಮೇಲಿರುವ ಅಪರಾದ ಸಾಭೀತು ಪಡಿಸಲು ಸಾಧ್ಯವಿಲ್ಲ. ಅಭಿಯೋಜನೆಯು ಕೇವಲ ದಾಖಲೆಗಳು ಮತ್ತು ಪೋಲಿಸ್ ಸಿಬ್ಬಂದಿಯ ಸಾಕ್ಷಿಗಳ ಆಧಾರದ ಮೇಲೆ ಪ್ರಕರಣವನ್ನು ಸಾಭೀತು ಪಡಿಸಲು ಪ್ರಯತ್ನಿಸಲಾಗಿರುತ್ತದೆ. ಆದರೆ ಮೇಲೆ ಹೇಳಿದ ಅಂಶಗಳನ್ನು ಸಾಭೀತು ಪಡಿಸಲು ಸ್ವತಂತ್ರ ಸಾಕ್ಷಿಗಳ ಮೌಖಿಕ ಸಾಕ್ಷ್ಯದ ಅವಶ್ಯಕತೆ ಇರುತ್ತದೆ. ಮೇಲಾಗಿ ಪೊಲಿಸ್ ಇಲಾಖೆಯಿಂದ ಕ್ಯಾಮಾರ ಇರುವಂತಹ ಮೊಬೈಲ್ ಪೋನುಗಳನ್ನು ಪೋಲಿಸರಿಗೆ ನೀಡಿರುತ್ತಾರೆ ಅಂತಹ ಕ್ಯಾಮಾರದಿಂದ ದಾಳಿ ಮಾಡಿದಾಗ ದಾಳಿ ಮಾಡಿದ ಸಾಕ್ಷಿಯಾಗಿ ಒಂದು ಛಾಯಾ ಚಿತ್ರವನ್ನು ಸಹ ಚಾಸಾ 1 ಅಥವಾ ಅವರ ಸಿಬ್ಬಂದಿಯಾಗಲಿ ತೆಗೆದಿರುವುದಿಲ್ಲ. ಆರೋಪಿತನ ವಿರುದ್ಧ ಈ ಪ್ರಕರಣದಲ್ಲಿ ಆಪಾಧಿಸಲಾದ ಯಾವುದೇ ಅಪರಾಧ ಮಾಡಿದ ಬಗ್ಗೆ ನಿಸ್ಸಂಶಯುತವಾಗಿ ತನಿಖೆಯಲ್ಲಿ ಕಂಡು ಬಂದಿರುವುದಿಲ್ಲ ಮತ್ತು ತನಿಖೆಯು ದೋಷಾಪೂರಿತವಾಗಿರುತ್ತದೆ ಹಾಗೂ ಅಪರಾಧ ಸಾಭೀತುಪಡಿಸಲು ಅಭಿಯೋಜನೆಗೆ ಸಾಧ್ಯವಾಗದೆ ಇರುವುದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಮೇಲಿನ ಅಂಶಗಳಿಗೆ ಈ ಮೂಲಕ ನಕರಾತ್ಮಕವಾದ ಉತ್ತರವನ್ನು ನೀಡಲಾಗಿದೆ.

27) ಅಂಶ 03: ಈ ಮೇಲಿನ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ;

## ಆದೇಶ

- ಕಲಂ. *248 (1)* ದಂ. ಪ್ರ. ಸಂ. ಅಡಿಯಲ್ಲಿ ಆರೋಪಿತನ ವಿರುದ್ಧ ಕಲಂ.*32* ಮತ್ತು *34* ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿನ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

- ಆರೋಪಿತನ ಹಾಗೂ ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

- ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ಮು.ಮಾ ***01*** ನ್ನು ಅನುಪಯುಕ್ತ ವಸ್ತುಗಳು ಆಗಿದ್ದರಿಂದ ಇದನ್ನು ಅಫಿಲು ಅವದಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಅದೇಶಿಸಿಸಲಾಗಿದೆ ಮತ್ತು ಮು.ಮಾ ***02*** ನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಲು ಆದೇಸಲಾಗಿದೆ.

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚಾದ ನಂತರ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 1.6.2026 ರಂದು ಘೋಷಿಸಲಾಯಿತು.)

(ಶ್ರೀಮತಿ.ಅಕ್ಷತಾ.ಟಿ)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.

# ಅನುಬಂಧ

ಅಭಿಯೋಜನಾ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:

ಫ್ರಾಸಾ-1 : ಸುರೇಶ
ಫ್ರಾಸಾ-2 : ಉಮೇಶ ನಾಯ್ಕ
ಫ್ರಾಸಾ-3 : ವೀರಶೇಖರ
ಫ್ರಾಸಾ-4 : ಫೈಜುಲ್ಲಾ ಡಿ.

ಅಭಿಯೋಜನಾ ಪರ ಗುರ್ತಿಸಿದ ದಾಖಲೆಗಳ ಪಟ್ಟಿ:

ನಿ.ಪಿ.1 : ಪಂಚನಾಮೆ
ನಿ.ಪಿ.2 : ನಕಾಶೆ
ನಿ.ಪಿ.3 : ದೂರು
ನಿ.ಪಿ.4 : ಪ್ರಥಮ ವರ್ತಮಾನ ವರದಿ

ಆರೋಪಿತನ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ ಮತ್ತು ದಾಖಲೆಗಳ ಪಟ್ಟಿ:
-- ಇರುವುದಿಲ್ಲ--
ಆರೋಪಿತನ ಪರ ನಿಶಾನೆಗೊಳಿಸಲ್ಪಟ್ಟ ದಸ್ತಾವೇಜಗಳ ಯಾದಿ
**M.O.No.1 :** ಖಾಲಿ ಪೌಚಗಳು
**M.O.No.2 :315** ರೂಪಾಗಳು

(ಶ್ರೀಮತಿ.ಅಕ್ಷತಾ.ಟಿ)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಹಡಗಲಿ.